# THE BOOK WAS DRENCHED

UNIVERSAL LIBRARY
OU_198427
UNIVERSAL LIBRARY

# ಸಾಹಿತ್ಯ ಪ್ರಚಾರ

---

ಕೆ. ವಿ. ಪುಟ್ಟಪ್ಪ, ಎಂ.ಎ.

---

ಕರ್ಣಾಟಕ ಸಂಘ

ಶಿವಮೊಗ್ಗ

೧೯೩೦

*(All Rights Reserved)*

ಬಿ. ಬಿ. ಡಿ. ಪವರ್ ಪ್ರೆಸ್, ಅರಳಿ ಪೇಟೆ
ಬೆಂಗಳೂರು ಸಿಟಿ

# ಸಾಹಿತ್ಯ ಪ್ರಚಾರ

(ಶಿವಮೊಗ್ಗೆಯಲ್ಲಿ ಸ್ಥಾಪಿತವಾದ ಕರ್ಣಾಟಕ ಸಂಘದ ಆರಂಭೋತ್ಸವದಲ್ಲಿ ಮ|| ಕೆ. ವಿ. ಪುಟ್ಟಪ್ಪ, ಎಂ. ಎ. ಅವರು ಮಾಡಿದ ಭಾಷಣ. ೮–೧೧–೧೯೩೦.)

ಆರ್ಯಮಹಿಳೆಯರೇ, ಆರ್ಯಮಹನೀಯರೇ, ನನ್ನ ಮೋಹದ ಮಲೆನಾಡಿಗರೇ,

ಅತ್ಯಲ್ಪ ಗಣ್ಯನಾದ ನನ್ನ ಮೇಲೆ ವಿಶ್ವಾಸದಿಂದ ತಾವು ತೋರಿಸಿರುವ ಈ ಗೌರವಕ್ಕಾಗಿ ನಾನು ಎದೆ ತುಂಬಿ ತಲೆಬಾಗಿ ನಿಮಗೆ ವಂದಿಸುತ್ತೇನೆ. ಮಲೆನಾಡಿನ ಮಹಾನಗರ ಎಂದೆನಿಸಿಕೊಳ್ಳಲು ಅರ್ಹವಾಗಿರುವ ಈ ಶಿವಮೊಗ್ಗೆಯಲ್ಲಿ ಕರ್ಣಾಟಕ ಸಂಘವೊಂದನ್ನು ಸ್ಥಾಪಿಸಲು ತಾವುಗಳು ಮಾಡಿರುವ ಪ್ರಯತ್ನಕ್ಕಾಗಿ ನಿಮಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳಿರಲಿ. ಕೆಲವು ದಿನಗಳ ಹಿಂದೆ ಈ ವಿಷಯವನ್ನು ಕುರಿತು ನನ್ನ ಮಿತ್ರರು ನನಗೆ ಕಾಗದ ಬರೆದಾಗ ನನ್ನ ಎದೆಯಲ್ಲಿ ಚಿಮ್ಮಿದ ಆನಂದವನ್ನು ನಿಮಗೊರೆಯಲಾರೆ. ಆದರೂ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಆಡದಿರಲಾರೆ. ನೀವೆಲ್ಲ ನನ್ನವರು ಎಂಬ ಭಾವನೆಯಿಂದ ನನಗಿಂದು ಎದೆದೆರೆದು ಮಾತಾಡಲು ಕೆಚ್ಚು ಮೂಡಿದೆ. ಮೊನೆಯಿಲ್ಲದ ಆ ನುಡಿಗಳನ್ನು ತಾವು ಮನ್ನಿಸುವಿರೆಂದು ನಂಬಿದ್ದೇನೆ.

"ಶಿವಮೊಗ್ಗೆಯಲ್ಲಿ ಕರ್ಣಾಟಕಸಂಘ ಸ್ಥಾಪನೆಯಾಗುವುದು; ನೀವು ಪ್ರಾರಂಭೋತ್ಸವದಲ್ಲಿ ಉಪಕ್ರಮ ಭಾಷಣ ಮಾಡಬೇಕು; ಇಲ್ಲಿಯ ಜನರು ನಿಮ್ಮನ್ನು ಎದುರುಗೊಳ್ಳಲು ಕುತೂಹಲಿಗಳಾಗಿದ್ದಾರೆ; ನೀವು ಇದನ್ನು ವಿನೋದ ಮಾತ್ರವೆಂದು ಪರಿಗಣಿಸದೆ ಖಂಡಿತ ಬರಲೇಬೇಕು; ನಿಮ್ಮಿಂದ ನಮ್ಮ ಆಕಾಂಕ್ಷೆಗೆ ವಿರುದ್ಧವಾದ ಪ್ರತ್ಯುತ್ತರವನ್ನು ನಾವು ಬಯಸುವುದೇ ಇಲ್ಲ" ಎಂದು ನನ್ನ ಗೆಳೆಯರು ಕಾಗದ

ಬರೆದರು! ನಾನು ಹೆಮ್ಮೆಯಿಂದಲೂ ದೈನ್ಯದಿಂದಲೂ ಒಪ್ಪಿಕೊಂಡೆ. ಏಕೆಂದರೆ ನನ್ನ ಮಿತ್ರರ ವಾಣಿಯಲ್ಲಿ ನಾನು ಯಾವ ಕನ್ನಡದೇವಿಯ ಆರಾಧನೆಗೆಂದು ಇತರ ನನ್ನ ಗುರು ಮಿತ್ರರಂತೆ, ದೀಕ್ಷಾಬದ್ಧನಾಗಿದ್ದೇನೆಯೋ, ಆ ಪುಣ್ಯಮಾತೆಯ ವಾಣಿಯು ಕೇಳಿಬಂದಿತು. ಮಿತ್ರರ ವಾಣಿಯ ವೇಷದಿಂದ ನನ್ನೆಡೆಗೆ ಬಂದ ಕರ್ಣಾಟಕ ಸಾಹಿತ್ಯದೇವಿಯ ಅನುಜ್ಞೆಯನ್ನು ಮೀರಲು ಎದೆ ಬರದೆ ಒಪ್ಪಿಕೊಂಡೆ. ಎರಡನೆಯದಾಗಿ, ನಾನು ಮಲೆನಾಡಿಗನು. ಮಲೆನಾಡಮ್ಮನ ಹೊಟ್ಟೆಯಲ್ಲಿ ಹುಟ್ಟಿ, ಮಡಿಲಿನಲ್ಲಿ ಬೆಳೆದು, ತೊಡೆಯ ಮೇಲೆ ನಲಿದು, ಆ ತಾಯಿಯ ಮೊಲೆಹಾಲು ಕುಡಿದು ಬೆಳೆದು ಬಂದವನು. ಮಲೆನಾಡೆಂದರೆ ನನಗೆ ಬಹಳ ಮಮತೆ. ಒಂದು ವಿಧವಾದ ಕುರುಡು ಮೋಹ ಎಂದರೂ ಎನ್ನಬಹುದು; ಮಲೆನಾಡು ಸೊಬಗಿನ ಬೀಡು; ಸಿಡಿಲು ಮಿಂಚುಗಳ ನಾಡು; ಸಾಲು ಸಾಲಾಗಿ ಎದ್ದಿರುವ ಬೆಟ್ಟಗಳು; ಮಾಲೆ ಮಾಲೆಯಾಗಿ ಬೆಳೆದಿರುವ ಕಾಡುಗಳು; ಅಲ್ಲಲ್ಲಿ ಬನ ಬೆಟ್ಟಗಳ ನಡುವೆ ಹರಿಯುವ ಹೊಳೆ ತೊರೆಗಳು; ಕಾಡಿನ ಮೇಲೆ ಮಲಗುವ ಬಿಸಿಲು ಬೆಳ್ದಿಂಗಳು; ವಿಧವಿಧವಾಗಿ ಇಂಚರಗೈವ ಸಾವಿರಾರು ಬಗೆಯ ಬಣ್ಣ ಬಣ್ಣದ ಹಕ್ಕಿಗಳು; ಅನಂತ ಶ್ಯಾಮಲ ವನಶ್ರೇಣಿಗಳಿಂದ ಆವೃತವಾದ ಧೀರ ಸಹ್ಯಾದ್ರಿ ಪರ್ವತಗಳ ಕಂದರ ಮಾರ್ಗಗಳಲ್ಲಿ ಮಂಜುಳ ನಾದದಿಂದ ಪ್ರವಹಿಸುವ ತುಂಗೆ, ಭದ್ರೆ, ಶರಾವತಿಯರು; ಶೃಂಗೇರಿ ಮೊದಲಾದ ಪುರಾತನ ಪವಿತ್ರ ಕ್ಷೇತ್ರಗಳು: ಗೇರುಸೊಪ್ಪೆ ಮೊದಲಾದ ದರ್ಶನೀಯ ಪ್ರಕೃತಿ ಸೌಂದರ್ಯ ಸ್ಥಾನಗಳು; ಇವೆಲ್ಲವುಗಳಿಂದ ಮೋಹಿತನಾದ ನನಗೆ ಮಲೆನಾಡೆಂದರೆ ಬಹಳ ಮಮತೆ. ಶಿವಮೊಗ್ಗೆ ಮಲೆನಾಡಿನ ಮುಹಾನಗರವಾದ್ದರಿಂದ ಇಲ್ಲಿ ಸ್ಥಾಪಿತವಾಗುವ ಕರ್ಣಾಟಕ ಸಂಘದ ಪ್ರಾರಂಭೋತ್ಸವದಲ್ಲಿ ನಾನು ಭಾಗಿಯಾಗಲು ಒಪ್ಪದಿರುವುದಾದರೂ ಹೇಗೆ? ನಾನು ಒಪ್ಪಿದ್ದಕ್ಕೆ ಇನ್ನೊಂದು ಕಾರಣವನ್ನು ಹೇಳಿ ಬಿಡುತ್ತೇನೆ. ನನಗೆ ನಿಮ್ಮ ಅಭಿಮಾನವೇ ಒಂದು ರಕ್ಷೆ. ನಾನು ನಮ್ಮೂರಿನಿಂದ ಮೈಸೂರಿಗೆ ಹೋಗುವಾಗ ಶಿವಮೊ

ಗ್ಗೆಯಲ್ಲಿ ಎರಡು ದಿನ ನಿಲ್ಲುವುದು ವಾಡಿಕೆ. ಅದಕ್ಕೆ ಇಲ್ಲಿರುವ ನನ್ನ
ಕೆಲವು ಗೆಳೆಯರೇ ಕಾರಣ. ಅವರು ಯಾವಾಗಲೂ ಅಪ್ಪಣೆ ಮಾಡು
ವರೇ ಹೊರತು ಬೇಡುವ ಪದ್ಧತಿಯನ್ನು ಇಟ್ಟುಕೊಂಡೇ ಇಲ್ಲ.
ಅವರ ಮೈತ್ರಿಯ ಪಂಜರದಲ್ಲಿ, ಹಾರಿಹೋಗುವ ನಾನು ಕೆಲವು ಸಾರಿ
ಏಳೆಂಟು ದಿನಗಳು ಕೂಡ ಸಿಕ್ಕಿಬಿಟ್ಟಿದ್ದೇನೆ. ನನಗೆ ಯಾವಾಗಲೂ
ಶಿವಮೊಗ್ಗೆಯ ಸುತ್ತಣ ಸನ್ನಿವೇಶವು ಮನೋಹರವಾಗಿಯೇ ಕಂಡು
ಬಂದಿದೆ. ಬಳಿಯಲ್ಲಿಯೇ ಹರಿಯುವ ತುಂಗೆ, ಸುತ್ತಲೂ ಹೆಚ್ಚು
ಎತ್ತರವಿಲ್ಲದ ಹಸುರಾದ ಗುಡ್ಡಗಳು; ಹೊಸ ರೈಲ್ವೆ ಸ್ಟೇಷನ್ನಿನ
ಚೇತೋಹಾರಿಯಾದ ದೃಶ್ಯ; ಹೊಳೆಯ ಮರಳುಗುಡ್ಡೆಯಲ್ಲಿ ಬೆಳೆ
ಯುವ ಶೀತಲ ರಸಪೂರ್ಣವಾದ ಕಲ್ಲಂಗಡಿ ಹಣ್ಣಿನ ಫಲಾಹಾರ;
ಇವುಗಳೆಲ್ಲ ನನ್ನ ಮಿತ್ರರೊಡ್ಡುವ ಮೈತ್ರಿಪಂಜರದ ಸರಳುಗಳು!
ಇಷ್ಟು ಸೌಂದರ್ಯವಿದ್ದರೂ ಕೂಡ ಶಿವಮೊಗ್ಗೆಯು ನನ್ನ ಕಣ್ಣಿಗೆ
ಮಾಂಗಲ್ಯವಿಲ್ಲದ ಸುಂದರಿಯಂತೆ ತೋರುತ್ತಿತ್ತು. ಅದು ನನಗೆ ಬರಿ
ಯ ಕಾಂಚನಾಭಿಲಾಷಿಯಾದ ವ್ಯಾಪಾರಗಾರರ ದೊಡ್ಡ ಮಳಿಗೆ
ಯಂತೆ ತೋರುತ್ತಿತ್ತೇ ಹೊರತು, ರಸಜೀವಿಗಳ ಆತ್ಮಕಲ್ಯಾಣಕ್ಕೆ
ಸಾಧನರಂಗವಾದ ಪುಣ್ಯಾಶ್ರಮದಂತೆ ತೋರುತ್ತಿರಲಿಲ್ಲ. ಏಕೆಂದರೆ
ಇಲ್ಲಿ ಸಾಹಿತ್ಯ, ಚಿತ್ರಕಲೆ, ತತ್ತ್ವಜಿಜ್ಞಾಸೆ ಮೊದಲಾದ ಉದಾತ್ತ
ಕಾರ್ಯಗಳಿಗೆ ಸಾಕಾದಷ್ಟು ಆರಾಧನೆ ದೊರೆಯುತ್ತಿರಲಿಲ್ಲ ಎಂದು
ನನ್ನ ಭಾವನೆಯಾಗಿತ್ತು. ಆ ಭಾವನೆ ತಪ್ಪಾಗಿದ್ದ ಪಕ್ಷದಲ್ಲಿ ನನ
ಗೇನೂ ಬಹಳ ಸಂತೋಷವೇ. ಅಂತು ನನಗೆ ಹಾಗೆ ತೋರು
ತ್ತಿತ್ತು. ಅಂತಹ ಉದಾತ್ತ ಕಾರ್ಯಗಳು ಇರಲೇ ಇಲ್ಲವೆಂದು ನನ್ನ
ಅಭಿಪ್ರಾಯವಲ್ಲ; ಶಿವಮೊಗ್ಗೆಯಂತಹ ದೊಡ್ಡ ಪಟ್ಟಣಕ್ಕೆ, ಹೆಸ
ರಾದ ಊರಿಗೆ, ತಕ್ಕಷ್ಟು ಇರಲಿಲ್ಲವೆಂದು ನನ್ನ ಭಾವನೆಯಾಗಿತ್ತು.
ಆದ್ದರಿಂದ ನನ್ನ ಸ್ನೇಹಿತರು, ನನ್ನ ಮಾನ್ಯಮಿತ್ರರಾದ ಶ್ರೀಮಾನ್
ಮಾಸ್ತಿ ವೆಂಕಟೇಶ ಐಯಂಗಾರ್ಯರು, ಶ್ರೀಯುತ ಬೇಂದ್ರೆಯ
ವರು ಇಲ್ಲಿಗೆ ಬಂದುದರ ಫಲವಾಗಿ ಕರ್ಣಾಟಕ ಸಂಘವು ಸ್ಥಾಪಿತ

ವಾಗುತ್ತದೆಂದು ಕಾಗದ ಬರೆದಾಗ ನನಗೆ ಮಹದಾನಂದವಾಯಿತು. ಆದ್ದರಿಂದಲೇ ನನ್ನನ್ನು ಉತ್ಸವದಲ್ಲಿ ಭಾಗಿಯಾಗಬೇಕೆಂದು ಕೇಳಿಕೊಂಡಾಗ ದೈನ್ಯದಿಂದ ಸಮ್ಮತಿಸಿದೆನು. ನನಗಿಂದು ಶಿವಮೊಗ್ಗೆಯಲ್ಲಿ ಎಂದಿಗಿಂತಲೂ ಹೆಚ್ಚಾದ ಮೋಹ ಜನಿಸಿದೆ. ಇನ್ನು ಮೇಲೆ ಇಲ್ಲಿಯ ರಸಜೀವನವು ತುಂಬಿ ತುಳುಕಿ ಉಕ್ಕಿ ಹರಿಯುವುದೆಂದು ನನಗೆ ಸಂಪೂರ್ಣವಾಗಿ ಭರವಸೆಯಿದೆ.

ಈಗ ಭರತಖಂಡಕ್ಕೊಂದು ಪರಿವರ್ತನೆಯ ಕಾಲ ಒದಗಿದೆ. ಮಹಾವ್ಯಕ್ತಿಗಳು ಮಹಾಶಕ್ತಿವಾಹಿನಿಯನ್ನು ದೇಶದ ಮೇಲೆ ಹರಿಯಲು ಬಿಟ್ಟಿದ್ದಾರೆ. ಅದೇನು ಸಾಮಾನ್ಯವಾದ ಪ್ರವಾಹವಲ್ಲ; ಪ್ರಚಂಡ ಪ್ರವಾಹ. ಆ ಬಲ್ಮೆಯ ಹೊನಲು ದೇಶದ ಮೂಲೆಮೂಲೆಗಳಲ್ಲಿ ನುಗ್ಗಿ ಜಡಜೀವನವನ್ನು ಕೊಚ್ಚುತ್ತಿದೆ. ಅದರ ವೈದ್ಯುತಸ್ಪರ್ಶದಿಂದ ನಿರ್ಜೀವವಾಗಿದ್ದ ಅಸ್ಥಿಪಂಜರಗಳೂ ಕೂಡ ಸಚೇತನವಾಗಿ ಕಾರ್ಯೋನ್ಮುಖವಾಗಲಾರಂಭಿಸಿವೆ. ಮಲಗಿದ್ದ ನಾಡು ಎಚ್ಚೆತ್ತಿದೆ. ಕುರಿಗಳಂತೆ ಅರಚುತ್ತಿದ್ದವರು ಸಿಂಹಗಳಂತೆ ಗರ್ಜಿಸುತ್ತಿದ್ದಾರೆ. ಬೀಸುವ ಬಿರುಗಾಳಿಯು ಬೂದಿಮುಚ್ಚಿದ ಕೆಂಡಗಳನ್ನು ಊದಿ ಊದಿ ನುಗ್ಗುತ್ತಿದೆ! ಇದ್ದಲಿನಂತಿದ್ದವರು ಈಗ ಕೆಂಗೆಂಡಗಳಂತೆ ದೇದೀಪ್ಯಮಾನರಾಗಿದ್ದಾರೆ; ಮೂಕರಾಗಿದ್ದವರು ವಾಗ್ಮಿಗಳಾಗಿದ್ದಾರೆ; ಕುರುಡರಿಗೆ ಕಣ್ಣು ಬಂದಿದೆ; ದುರ್ಬಲರಂತಿದ್ದವರಿಗೆ ಭೀಮಬಲ ಬಂದಿದೆ; ಕ್ಲೈಬ್ಯವು ಮಾಯವಾಗಿ ಎದೆಯಲ್ಲಿ ಕೆಚ್ಚುದಿಸಿದೆ; ಬಗೆಯಲ್ಲಿ ನೆಚ್ಚು ಮೂಡಿದೆ. ಇದು ರಾಜಕೀಯ ಪ್ರಪಂಚದ ಮಾತಾಯಿತು. ಇನ್ನು ಸಾಹಿತ್ಯಪ್ರಪಂಚದಲ್ಲಿಯೋ ಎಂದರೆ ಅಲ್ಲಿಯೂ ಅದೇ ರೀತಿಯ ನೂತನಚೇತನೋತ್ಪತ್ತಿಯು ತೋರಿಬಂದಿದೆ. ಸಾಹಿತ್ಯವು ಜನಜೀವನದ ವಾಣಿ. ಬರೆಯುವವರು ಬರೆಯಲಾರದಿರುವ ಸಾವಿರಾರು ಜನರಿಗೆ ಪ್ರತಿನಿಧಿಗಳು. ಕವಿಗಳೆಂದರೆ ನಾಡಿನ ನಾಡಿಗಳು. ಸಹಸ್ರ ಸಹಸ್ರಹೃದಯಗಳಲ್ಲಿ ಸುಳಿಯುವ ಭಾವಗಳಿಗೆ ಕವಿಹೃದಯವು ಕನ್ನಡಿಯಂತೆ. ಸಾಹಿತ್ಯವು ಸಂಸ್ಕೃತಿಯ ಪುರೋಗಮನಕ್ಕೆ

ಸೋಪಾನ ಮಾರ್ಗ. ಜ್ಞಾನಾಮೃತಪಾನದಿಂದ ಸಂಸ್ಕೃತಿಯು ಅಭ್ಯುದಯವನ್ನೈದುವುದು. ಸಾಹಿತ್ಯವು ಜ್ಞಾನಧೇನುವಿನ ಕೆಚ್ಚಲು; ಅಂದ ಮೇಲೆ ಸಾಹಿತ್ಯದ ಮೇಲ್ಮೆಯಿಂದ ಜನಜೀವನದ ಮೇಲ್ಮೆಯುಂಟಾಗುವುದು. ರಾಜಕೀಯ ಪ್ರಪಂಚದಲ್ಲಿ ನವಜೀವನವುಂಟಾದರೆ ಜನಜೀವನದಲ್ಲಿಯೂ ಅದು ಪ್ರವಹಿಸಿಯೇ ಪ್ರವಹಿಸುವುದು. ಬೀಜವೃಕ್ಷನ್ಯಾಯದಂತೆ ಆ ಹೊಸ ಹುರುಪು ಸಾಹಿತ್ಯದಲ್ಲಿ ಕನ್ನಡಿಸುವುದು. ಆದರಿಂದಲೇ, ಈಗ ಎಲ್ಲೆಲ್ಲಿಯೂ, ಎಲ್ಲ ದೇಶಭಾಷೆಗಳಲ್ಲಿಯೂ, ಹೊಸ ಕಳೆಯು ಹೊರಹೊಮ್ಮುತ್ತಿದೆ. ಅಂತೆಯೇ ನಮ್ಮ ಕನ್ನಡ ಸಾಹಿತ್ಯದಲ್ಲಿಯೂ ನವಚೈತನ್ಯದ ಚಿಲುಮೆಯು ಚಿಮ್ಮತೊಡಗಿದೆ. ಕನ್ನಡನಾಡು ಕಣ್ದೆರೆಯುತ್ತಿದೆ. ಉನ್ನಿದ್ರಾವಸ್ಥೆಯ ಸೂಚನೆಗಳು ತೋರಿಬರುತ್ತಿವೆ. ಸಾಹಿತ್ಯಪ್ರಪಂಚದ ಸನಾತನ ಪುಣ್ಯಾಕಾಶದಲ್ಲಿ ತುಂಬಿದ್ದ ಕತ್ತಲೂ ಮೌನವೂ ಮೆಲ್ಲಮೆಲ್ಲನೆ ಸರಿಯತೊಡಗಿವೆ. ಆದರ ಪೂರ್ವ ದಿಗಂತದಲ್ಲಿ ನೂತನ ಚೇತನದ ಪಾವನವಾದ ಬಾಲಾರುಣಜ್ಯೋತಿಯು ಮೊಳೆದೋರಿದೆ. ಅಲ್ಲಲ್ಲಿ, ನಿಶಾಸಾಮ್ರಾಜ್ಯದ ತಾಮಸ ವೈಭವವನ್ನು ಬಹುಕಾಲದಿಂದಲೂ ಸವಿದು, ಈಗ ಮೂಡುತ್ತಿರುವ ಮುಂಬೆಳಕಿನ ಧೀರಶ್ರೀಯನ್ನು ನೋಡಲಾರದೆ ಹಲಕೆಲವು ಗೂಬೆಗಳು 'ಗೂ! ಗೂ!' ಎಂದು ಕೂಗುತ್ತಿದ್ದರೂ, ಅದನ್ನು ಗಣನೆಗೆ ತಾರದೆ ಅರುಣೋದಯದ ಮಂಗಳಕಾಂತಿಗೆ ಸುಖಾಗಮನವನ್ನು ಬಯಸಲು ಅನೇಕಾನೇಕ ಮಧುರ ಕಂಠದ ವಿಹಂಗಮಗಳು ಉಲಿಯಲು ತೊಡಗಿವೆ. ಆ ತುಮುಲಸ್ವರಮೇಳಸಮುದ್ರದಲ್ಲಿ ಪೇಚಕಪಕ್ಷಿಗಳ ಅಪಶಕುನ ಸೂಚಕವಾದ ವಿಕಟ ಧ್ವನಿಗಳು ಮುಳುಗಿ ಹೋಗುತ್ತಿವೆ. ಈ ಸರ್ವೋದಯದಲ್ಲಿ ನಮ್ಮ ನಾಡಿನ ಜನರ ಎದೆದಾವರೆಗಳು ಹಿಗ್ಗಿ ಅರಳುತ್ತಿರುವುವು.

ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿಯೂ ಜನರು ಸಾಹಿತ್ಯಸೇವೆಗೆ ಹೊರಟಿದ್ದಾರೆ. ಮೈಸೂರುದೇಶ, ಉತ್ತರ ಕರ್ಣಾಟಕ, ನಿಜಾಂ ಕರ್ಣಾಟಕ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಎಲ್ಲ ಕಡೆ

ಗಳಿಂದಲೂ, ಸಾಹಿತ್ಯ ದೇವಿಯ ಪವಿತ್ರ ಮಂದಿರದಲ್ಲಿ ನಡೆಯುವ ಪೂಜೆಯ ಘಂಟಾನಾದವೂ, ಎತ್ತುವ ಮಂಗಳಾರತಿಯ ಪೂತಜ್ಯೋತಿಯೂ, ಕರ್ಣಸಯಸ ಮನೋಹರವಾಗಿರುವುವು. ಬರೆಯುವವರೂ, ಓದುವವರೂ ಹೆಚ್ಚುತ್ತಿದ್ದಾರೆ. ಹಿಂದೆ ಕನ್ನಡ ನುಡಿಯಲ್ಲಿದ್ದ ಔದಾಸೀನ್ಯವೂ, ತಿರಸ್ಕಾರಭಾವವೂ ಈಗ ದೂರವಾಗುತ್ತಿವೆ. ನಮ್ಮ ನುಡಿ ಎಂಬ ಹೆಮ್ಮೆಯು, ನಮ್ಮ ನಾಡು ಎಂಬ ಹೆಮ್ಮೆಯೊಡನೆಯೇ ಬಳೆಯುತ್ತಿದೆ. ದೊಡ್ಡ ದೊಡ್ಡ ಅಧಿಕಾರಿಗಳೂ, ಆಂಗ್ಲೇಯಭಾಷಾ ಪಂಡಿತರೂ, ಉತ್ತಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಯುವಕರೂ, ಇನ್ನೂ ಓದುತ್ತಿರುವ ತರುಣರೂ, ತಾಯ್ನುಡಿಯ ಸೇವೆಗೆ ತೊಡಗಿದ್ದಾರೆ. ಕರ್ಣಾಟಕ ದೇಶದಲ್ಲಿ, ಎಲ್ಲೆಲ್ಲಿಯೂ ಕರ್ಣಾಟಕ ಸಂಘಗಳು ಮೂಡುತ್ತಿವೆ. ಅಷ್ಟೇ ಅಲ್ಲ. ದೂರದ ನಾಡುಗಳಲ್ಲಿಯೂ ಕೂಡ, ಅಲ್ಲಿರುವ ಕನ್ನಡಿಗರು ಸಂಘಗಳನ್ನು ಸ್ಥಾಪಿಸಿದ್ದಾರೆ. ಪುಣೆ, ಮುಂಬಯಿ, ಮದ್ರಾಸು, ಕಲ್ಕತ್ತಗಳಲ್ಲಿ ಕರ್ಣಾಟಕ ಸಂಘಗಳು ಬೇರೆ ಬೇರೆ ಹೆಸರುಗಳಿಂದ ಸ್ಥಾಪಿತವಾಗಿವೆ. ಅನೇಕಾನೇಕ ವೃತ್ತ ಪತ್ರಿಕೆಗಳೂ, ಮಾಸಪತ್ರಿಕೆಗಳೂ, ತ್ರೈಮಾಸಿಕಗಳೂ, ನಾಡಿನ ಮೇಲೆಲ್ಲ ಸಂಚರಿಸುತ್ತಿವೆ. ಎಲ್ಲಕ್ಕೂ ಹೆಚ್ಚಾಗಿ, ಮೈಸೂರು ವಿಶ್ವವಿದ್ಯಾಪೀಠವು ಕನ್ನಡದಲ್ಲಿ ಎಮ್. ಎ. ತರಗತಿಯನ್ನು ತೆರೆದಿದೆ. ಅಲ್ಲದೆ ಕನ್ನಡಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು, ಮುಂದೆ ಎಂದಾದರೊಂದು ದಿನ, ಎಲ್ಲ ವಿಷಯಗಳನ್ನೂ ಕನ್ನಡದಲ್ಲಿಯೇ ಪಾಠ ಹೇಳಬೇಕೆಂಬ ಉಚ್ಚಧ್ಯೇಯವನ್ನು ಮನದಲ್ಲಿಟ್ಟುಕೊಂಡಿದೆ. ವಿದ್ವಾಂಸರು ಹಳೆಯ ಉದ್ಗ್ರಂಥಗಳನ್ನು ಮುದ್ರಿಸಿ ಬೆಳಕಿಗೆ ತರುತ್ತಿದ್ದಾರೆ. ಸಾಹಿತ್ಯ ಪ್ರೇಮಿಗಳು ಜನಪದಸಾಹಿತ್ಯವನ್ನು ಒಟ್ಟುಗೂಡಿಸುತ್ತಿದ್ದಾರೆ. ಇಷ್ಟೆಲ್ಲ ಸರ್ವಸಾಮಾನ್ಯ ವಿಷಯವಾಯಿತು. ಇನ್ನು ವಿಶೇಷವನ್ನು ಕುರಿತು ಪರಿಶೀಲಿಸೋಣ.

ಕನ್ನಡ ಸಾಹಿತ್ಯ ದೇವಿಯು ನವಾರುಣೋದಯದ ಹೊಸ ಕಳೆಯಿಂದ ತುಂಬಲ್ಪಟ್ಟ ಹೊಂಗಳಸವನ್ನು ಕೈಲಿ ಹಿಡಿದು ಹೊಸದಾರಿ

ಯಲ್ಲಿ ಹೊರಟಿದ್ದಾಳೆ. ಅಲಂಕಾರದ ಮುಚ್ಚುಮರೆಯನ್ನು ಬಿಚ್ಚಿ ಹೇಳುವುದಾದರೆ ಪಾಶ್ಚಾತ್ಯ ಸಂಸ್ಕೃತಿಯು ಮತ್ತು ಪಾಶ್ಚಾತ್ಯ ಸಾಹಿತ್ಯದ ಸಂಸರ್ಗದಿಂದ ಕನ್ನಡನುಡಿಯಲ್ಲಿ ಹೊಸಹೊಸರೂಪಗಳು ಹೊರಹೊಮ್ಮುತ್ತಿವೆ. ಪಾಶ್ಚಾತ್ಯ ಸಾಹಿತ್ಯದ ಆತ್ಮ ಜ್ಯೋತಿಗೂ ಆತ್ಮವೈಭವಕ್ಕೂ ಮನಸೋತ ನಮ್ಮವರು ಆದರ ಶ್ರೇಷ್ಠಾಂಶಗಳನ್ನು ಹೀರಿಕೊಂಡು, ಸುಪುಷ್ಟರಾಗಿ, ನಮ್ಮವರಿಗೂ ಆ ಬೆಳಕಿನ ವೈಭವವನ್ನು ಒದಿಸಿತು ತೋರಲು ಹೊರಟಿದ್ದಾರೆ. ಆ ಉದ್ಯಮದ ಫಲರೂಪವಾಗಿ ಗದ್ಯ, ಪದ್ಯ, ನಾಟಕ, ಕಾದಂಬರಿ, ಪ್ರಬಂಧ, ಲಘುಪ್ರಬಂಧ, ಸಣ್ಣಕತೆ, ವಿಮರ್ಶೆ, ಜೀವನ ಚರಿತ್ರೆ ಇತ್ಯಾದಿಗಳು ಹೊರಬೀಳುತ್ತಿವೆ. ಇವುಗಳನ್ನು ಪರಿಶೀಲಿಸಲು ನಾಲ್ಕು ಕೇಂದ್ರಸ್ಥಾನಗಳನ್ನು ನಾವು ಆರಿಸಿಕೊಳ್ಳಬಹುದು.— ಮೈಸೂರು, ಬೆಂಗಳೂರು, ಧಾರವಾಡ, ಮಂಗಳೂರು. ಈ ನಗರಗಳಲ್ಲಿ ಸಂಘಗಳಿಂದಲೂ, ಗುಂಪುಗಳಿಂದಲೂ, ಸಾಹಿತ್ಯಮಂಡಲಗಳಿಂದಲೂ, ಗ್ರಂಥಾಲಯಗಳಿಂದಲೂ ಪ್ರಕಟವಾಗಿರುವ ಗ್ರಂಥಗಳನ್ನು ತೆಗೆದುಕೊಂಡರೆ ಈಗ ನಮ್ಮ ಸಾಹಿತ್ಯದಲ್ಲಿ ಆಗುತ್ತಿರುವ ಚಳವಳಿಯು ನಮಗೆ ಸ್ವಲ್ಪ ಮಟ್ಟಿಗೆ ಗೊತ್ತಾಗುವುದು. ಮೊದಲು ಕವಿತೆ. ಈಗ ಅಲ್ಲಲ್ಲಿ ಪ್ರಕಟವಾಗುತ್ತಿರುವ ಕವನಗಳು ರೂಪದಲ್ಲಿ ಬಹಳ ಮಟ್ಟಿಗೂ, ಆತ್ಮದಲ್ಲಿ ಸ್ವಲ್ಪ ಮಟ್ಟಿಗೂ ಆಂಗ್ಲೇಯ ಸಾಹಿತ್ಯವನ್ನೇ ಅನುಸರಿಸುತ್ತಿವೆಯೆಂಬುದು ನಿರ್ವಿವಾದವಾದ ಮಾತಾಗಿರುವುದು. ರೂಪವು ಬದಲಾಯಿಸಿದ್ದರೂ ಕೂಡ ಅದು ನಮಗೆ ಸಂಪೂರ್ಣವಾಗಿ ಹೊಸತಲ್ಲ. ಇನ್ನೂ ಸ್ವಲ್ಪ ಮುಂದೆ ಹೋಗಿ, ಧೈರ್ಯವಾಗಿ ಹೇಳುವುದಾದರೆ, ಹೊಸತೇ ಅಲ್ಲ ಎಂದೂ ಹೇಳಿಬಿಡಬಹುದು. ಏಕೆಂದರೆ, ಛಂದಶ್ಶಾಸ್ತ್ರವನ್ನು ಓದಿದ ಯಾರಿಗಾದರೂ ಈಗಿನ ಹೊಸರೂಪಗಳು ಹಳೆಯ ಷಟ್ಪದಿ ರಗಳೆಗಳ ರೂಪಾಂತರಗಳೆಂದು ತೋರದೆ ಇರುವುದಿಲ್ಲ. ಈಗಿನ ಹೊಸ ಕವನಗಳಿಗೆ ಆಧಾರವು ಆದಿಪಂಪನಲ್ಲಿಯೇ ದೊರಕುತ್ತವೆ. ನಮ್ಮ ಕನ್ನಡಕ್ಕೆ ಸಂಪೂರ್ಣವಾಗಿ ಅಸ್ವಾಭಾವಿಕವಾಗಿರುವ "ವೃತ್ತ"

ಗಳೆಂದು ನಾವು ಕರೆಯುವ ಸಂಸ್ಕೃತ ಛಂದಸ್ಸು ಮಾತ್ರ ಬಿದ್ದು ಹೋಗುತ್ತಿದೆ. ಏಕೆಂದರೆ ಅಕ್ಷರ ಛಂದಸ್ಸು ನಮ್ಮ ನುಡಿಗೆ ಎರವು ತಂದ ವೇಷ. ಮಾತ್ರಾಛಂದಸ್ಸೇ ನಮಗೆ ಸಹಜವಾದುದು. ನಮ್ಮ ಪೂರ್ವಿಕರಾದ ಹರಿಹರ ರಾಘವಾಂಕರು ಇದನ್ನು ಅರಿತೇ ರಗಳೆ ಗಳನ್ನೂ ಷಟ್ಪದಿಗಳನ್ನೂ ರಚಿಸಿದರು. ಅವರ ತರುವಾಯ ಬಂದವರು ಯಾರಾರು ಜನಸಾಮಾನ್ಯಕ್ಕೆ ಜೀವನ ಜ್ಯೋತಿಯನ್ನು ದಯಪಾಲಿಸ ಬೇಕೆಂದು ಬಯಸಿದರೊ ಅವರೆಲ್ಲರೂ ಮಾತ್ರಾ ಛಂದಸ್ಸಿನಲ್ಲಿಯೇ ಕಾವ್ಯಗಳನ್ನು ಬರೆದಿದ್ದಾರೆ. ನಮ್ಮ ಭಾರತ, ಭಾಗವತ, ರಾಮಾಯಣ ಗಳು ಷಟ್ಪದಿಗಳಲ್ಲಿವೆ. ಶಿವಶರಣರ ಜೀವನ ಚರಿತ್ರೆಗಳನ್ನು ಹರಿಹರ ಕವಿಯು ರಗಳೆಯ ರೂಪದಲ್ಲಿಯೆ ಬರೆದಿದ್ದಾನೆ. ಆತನ ಅತ್ಯುತ್ತಮ ಕೃತಿಯಾದ, ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರಿಂದ ಸಂಪಾ ದಿತವಾಗಿರುವ, 'ಬಸವರಾಜದೇವರ ರಗಳೆ' ಯನ್ನು ಓದಿ ನೋಡಿದರೆ ಮಾತ್ರಾ ಛಂದಸ್ಸಿನ ಮಹಿಮೆಯು ಗೊತ್ತಾಗುವುದು. ನಾಡಿನ ಜನರ ಎದೆಯನ್ನು ಸೇರಲೆಳಸಿದ ಸರ್ವಜ್ಞ ಮೊದಲಾದ ಕವಿಗಳು ತ್ರಿಪದಿ ಮೊದಲಾದ ಪದ್ಯರೂಪಗಳನ್ನು ಬಳಕೆಗೆ ತಂದರು. ಆದ್ದರಿಂದ ಜನಜೀವನದಿಂದ ಪ್ರೇರಿತವಾದ ಸಾಹಿತ್ಯವು ಜನಜೀವನಕ್ಕೆ ಉಪ ಯೋಗವಾಗಬೇಕಾದರೆ, ಜನಜೀವನದ ವಾಣಿಯ ವೇಷವನ್ನು ಧರಿಸ ಬೇಕು; ಅಂದರೆ ಮಾತ್ರಾ ಛಂದೋನಿಯಮವನ್ನು ನಾವು ಬಳಕೆಗೆ ತರಬೇಕು. ಪಂಪ ರನ್ನ ಮೊದಲಾದ ಕವಿಗಳ ಮಹಾಕಾವ್ಯಗಳು ಏಕೆ ಉದ್ಗ್ರಂಥಗಳಾಗಿ ಮೇಲೆ ದೂರದಲ್ಲಿಯೇ ನಿಂತು ಬಿಟ್ಟವು: ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ ಮೊದಲಾದ ಕವಿಗಳ ರಸ ಕೃತಿಗಳು ಏಕೆ ಜನಜೀವನವನ್ನು ಪ್ರವೇಶಿಸಿದುವು? ಆಲೋಚಿಸಿ ನೋಡಿ. ಮೇಲೆ ಹೇಳಿದ ಕಾರಣವು ನಿಮಗೆ ಹೊಳೆಯುವುದು.

ಆದ್ದರಿಂದ ಈಗಿನ ಕವಿಗಳ ಉದ್ಯಮವು ಒಂದು ದೃಷ್ಟಿಯಿಂದ ಸಂಪೂರ್ಣವಾಗಿ ನೂತನವಾದುದಲ್ಲ ಎಂದು ಹೇಳಿದಂತಾಯಿತು. ನಾವು ಮುಂಜುಟ್ಟು ಬೈತಲೆಗಳನ್ನು ಬಿಟ್ಟ ಮಾತ್ರಕ್ಕೆ ಹೇಗೆ ಇಂಗ್ಲೀ

ಷಿನವರಾಗಲಾರೆವೊ ಹಾಗೆಯೇ ನವವೇಷ ಧಾರಣೆಮಾಡಿದ ಮಾತ್ರಕ್ಕೆ ಆಧುನಿಕ ಕವನಗಳು ವಿದೇಶೀಯವಾಗಲಾರವು. ಹಿಂದಿನವರು ಸ್ವಲ್ಪವಾಗಿ ಉಪಯೋಗಿಸಿಕೊಂಡಿದ್ದನ್ನು ನಾವೀಗ ಹೆಚ್ಚಾಗಿ ಬಳಕೆಗೆ ತರುತ್ತಿದ್ದೇವೆ. ಪೂರ್ವಿಕರು ಕಬ್ಬಿಣವನ್ನು ಆಯುಧಗಳಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಆದರೆ ಈಗ ಪಾಶ್ಚಾತ್ಯ ವಿಜ್ಞಾನ ಶಾಸ್ತ್ರಗಳ ಮಹಿಮೆಯಿಂದ ನಾವು ಕಬ್ಬಿಣದ ಕಾರ್ಖಾನೆಗಳನ್ನು ಸೃಜಿಸಿ ನಾನಾವಿಧವಾದ ಆಯುಧಗಳನ್ನು ತಯಾರಿಸುತ್ತಿದ್ದೇವೆ. ಅವುಗಳನ್ನೆಲ್ಲ ವಿದೇಶೀಯವೆಂದು ಹಳಿಯುವುದು ಮೂರ್ಖತೆಗೊಂದು ಹೆಗ್ಗುರುತು !

ಕವನಗಳ ಮಾತಾಯಿತು. ಇನ್ನು ನಾಟಕಗಳು. ಈಗೀಗ ನಾಟಕಗಳಲ್ಲಿ ಸರಳ ರಗಳೆ (Blank verse) ಯನ್ನು ಉಪಯೋಗಿಸುತ್ತಿದ್ದೇವೆ: ಸರಳ ರಗಳೆಯ ಶ್ರೀಮಂತಶೈಲಿಯು ಧೀರವೈಖರಿಯು ನನ್ನನ್ನಂತೂ ಮುಗ್ಧನನ್ನಾಗಿ ಮಾಡಿಬಿಟ್ಟಿದೆ. ರಾಮಾಯಣ, ಭಾರತ ಮುಂತಾದ ಪುರಾಣ ಕಾವ್ಯಗಳಿಗೆ ಸರಳ ರಗಳೆಯ ಮಾರ್ಗವು ಒಪ್ಪುತ್ತದೆಯೊ ಇಲ್ಲವೊ ನನಗಿನ್ನೂ ಸಂದೇಹ. ನಾನಿನ್ನೂ ಪರೀಕ್ಷಿಸಿಲ್ಲ. ಆದರೆ ನಾಟಕಕ್ಕೆ ಸರಳ ರಗಳೆಯಿಂದ ಮಹದುಪಕಾರವಾಗುವುದು ಎಂಬುದರಲ್ಲಿ ಸಂದೇಹವಿಲ್ಲ. ಪಾಶ್ಚಾತ್ಯ ರುದ್ರನಾಟಕಗಳ ಬಲವತ್ತಾದ ಭಯಂಕರವಾದ ಶೈಲಿಯು ನಮ್ಮಲ್ಲಿಗೆ ಬರಬೇಕಾದರೆ ಸರಳ ರಗಳೆಯೊಂದರಿಂದಲೇ ಸಾಧ್ಯ. ಈಗಾಗಲೆ ಅಂತಹ ಏಳೆಂಟು ನಾಟಕಗಳು ಹೊರಬಿದ್ದಿವೆ. ಅವುಗಳನ್ನು ಓದಿ ನೋಡಿ ಅಥವಾ ನಾಟಕೀಯವಾಗಿ ಓದಲು ಬಲ್ಲವರಿಂದ ಓದಿಸಿ ಕೇಳಿ ನೋಡಿ. ನಿಮ್ಮೆದೆಯು ಹಿಗ್ಗುವುದೆಂದೇ ನನ್ನ ಭಾವನೆ.

ಕವಿತೆ, ನಾಟಕ ಇವುಗಳ ವಿಷಯವಾಗಿ ಇರುವಷ್ಟು ಉಗ್ರವಾದ ಭಿನ್ನಾಭಿಪ್ರಾಯವು ಬಹುಶಃ ಸಣ್ಣಕತೆ, ಕಾದಂಬರಿ, ವಿಮರ್ಶೆ ಮೊದಲಾದವುಗಳ ವಿಚಾರವಾಗಿ ಇಲ್ಲವೆಂದು ಹೇಳಬಹುದು. ಕಾರಣವೇನೆಂದರೆ, ಸಣ್ಣಕತೆ ಮೊದಲಾದವುಗಳು ನಮಗೆ ಹೊಸತು. ಅಂತು

ಅಭಿಪ್ರಾಯಗಳು ಎಷ್ಟೇ ಭಿನ್ನವಾಗಿದ್ದರೂ ನಮ್ಮ ಸಾಹಿತ್ಯ ಪ್ರಪಂಚದಲ್ಲೀನೋ ಹೊಸಯುಗವು ಕಾಲಿಟ್ಟಾಗಿದೆ. ಆ ಮಿಂಚಿನ ಪ್ರವಾಹವು ಯಾರ ಪ್ರತಿಭಟನೆಗೂ ತರಹರಿಸುವುದಿಲ್ಲ. ಹಣ್ಣೆಲೆಗಳು ಎಷ್ಟೇ ಗೌರವಾರ್ಹವಾಗಿದ್ದರೂ ಸಕಾಲವೊದಗಿದಾಗ ಹೊಸತಳಿರಿಗೆ ಎಡೆಗೊಟ್ಟು, ಮಾತಿಲ್ಲದೆ ಕೆಳಗುದುರಲೇ ಬೇಕು. ಅದು ಪ್ರಕೃತಿ ನಿಯಮ. ಎಲೆಗಳಿಗಾಗಿ ಮರವಿರುವುದಲ್ಲ; ಮರಕ್ಕಾಗಿ ಎಲೆಗಳಿರುವುದು. ಆದ್ದರಿಂದ ಮರದ ಕಲ್ಯಾಣಕ್ಕಾಗಿ ಹಣ್ಣೆಲೆಗಳುದುರಿ ಹೊಸತಳಿರು ಚಿಗುರುವಂತೆ ನಾಡಿನ ಮೇಲ್ಮೆಗಾಗಿ ಹಳೆಯುದೆಲ್ಲ ಹೊಸದಾದುದಕ್ಕೆ ತಲೆಬಾಗಲೇ ಬೇಕು. ಹಾಗೆಯೇ ಸಾಹಿತ್ಯದಲ್ಲಿಯೂ, ಹೊಸಮಾರ್ಗಗಳಿಗೆ ಹಳೆಯ ಮಾರ್ಗಗಳು ಶರಣಾಗಲೇ ಬೇಕು. ಅದಾಗಲೇ ಪ್ರಾರಂಭವಾಗಿದೆ. ಹೊಸದರ ದಿಗ್ವಿಜಯವೇ ಅದಕ್ಕೆ ಸಾಕ್ಷಿ. ಜನರು ಆದರದಿಂದ ಹೊಸ ಸಾಹಿತ್ಯವನ್ನು ಸ್ವೀಕರಿಸುತ್ತಿದ್ದಾರೆ. ನೂರಾರು ಜನಗಳು ಎರಡು ಮೂರು ಗಂಟೆಗಳ ಹೊತ್ತು ಮೌನವಾಗಿ ಕುಳಿತು ಹೊಸ ಪದ್ಯಪಠನವನ್ನು ಕುತೂಹಲದಿಂದ ಕಿವಿದೆರೆದು ಕೇಳುವ ಕಾಲ ಬಂದಿದೆ. ಶಾಶ್ವತವಾದ ಶ್ರೇಷ್ಠ ಸಾಹಿತ್ಯಕ್ಕೆ ರಸಿಕರೂ, ಸುಸಂಸ್ಕೃತರೂ ಆದ ಜನಗಳ ಮೆಚ್ಚುಗೆಯ ವಾಣಿಯೇ ನಿಜವಾದ ಯೋಗ್ಯತಾ ಪತ್ರಿಕೆ; ಶುಷ್ಕವೈದುಷ್ಯದ ಗೊಣಗು ದನಿಯಲ್ಲ.

ಹೊಸತೆಂಬುದು ಹಳೆಯುದನ್ನು ತ್ಯಜಿಸಿ ನಿಲ್ಲುವುದೆಂದು ಯಾರೂ ತಿಳಿಯಬಾರದು. ಶಿಶುವು ತಾಯಿಯನ್ನು ಅಲ್ಲಗಳೆದು ಹೇಗೆ ಬದುಕಲಾರದೊ, ಮನೆಯು ತಳಹದಿಯನ್ನು ತಿರಸ್ಕರಿಸಿ ಹೇಗೆ ಬಹುಕಾಲ ನಿಲ್ಲಲಾರದೊ, ಹಾಗೆಯೇ ಅರ್ವಾಚೀನವು ಪ್ರಾಚೀನವನ್ನು ಅಸಡ್ಡೆ ಮಾಡಿ ಬಾಳಲಾರದು. ಸನಾತನದ ಸಾರವನ್ನು ಹೀರಿಕೊಂಡೇ ನೂತನವು ಬೆಳೆಯಬೇಕು. ವರ್ತಮಾನಕಾಲವು ಭೂತಕಾಲದ ನೆಲೆಗಟ್ಟಿನ ಮೇಲೆ ನಿಂತಿದೆ. ಇಂದು ನಿನ್ನೆಗೆ ಋಣಿಯು; ನಾಳೆ ಇಂದಿಗೆ ಋಣಿಯು. ಒಂದನ್ನೊಂದು ಎಂದಿಗೂ ಸಂಪೂರ್ಣವಾಗಿ ತ್ಯಜಿಸ

ಲಾರವು. ಹಾಗೆಯೇ ಇಂದಿನ ಸಾಹಿತ್ಯವು ಹಿಂದಿನ ಸಾಹಿತ್ಯವನ್ನು ಎಷ್ಟು ಮಾತ್ರಕ್ಕೂ ಅಲ್ಲಗಳೆಯುವುದಿಲ್ಲ. ಅಷ್ಟೇ ಏಕೆ, ಶಿಷ್ಯವೃತ್ತಿಯನ್ನವಲಂಬಿಸಿ ಅದನ್ನು ಗುರುವಿನಂತೆ ಆರಾಧಿಸುತ್ತದೆ. ಪ್ರಸಿದ್ಧರಾದ ಆಧುನಿಕ ಲೇಖಕರೆಲ್ಲರೂ ಹಳಗನ್ನಡ ಸಾಹಿತ್ಯದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದವರೇ. ಉತ್ತಮರಾದ ನಮ್ಮ ಪೂರ್ವಕವಿಗಳಲ್ಲಿ ಅವರಿಗೆ ಅತಿ ಮಮತೆ. (ಪೂರ್ವಕವಿಗಳ ಶ್ರೇಷ್ಠವಾದ ಸತ್ಕೃತಿಗಳನ್ನು ಬಯಲಿಗೆ ಬೀರಲು ಅವರುಗಳು ನಾನಾವಿಧವಾಗಿ ಪ್ರಯತ್ನ ಪಡುತ್ತಿದ್ದಾರೆ. ಕವಿಗಳ ಜನ್ಮದಿನಗಳನ್ನು ಆಚರಿಸುವುದು, ಅಂತಹ ಸಮಯಗಳಲ್ಲಿ ಅವರ ಕೃತಿಗಳನ್ನು ಜನರಿಗೆ ಹೃದಯಂಗಮವಾಗಿ ಓದಿ ತೋರಿಸುವುದು, ಹಳೆಯ ಗ್ರಂಥಗಳನ್ನು ಮುದ್ದಾಗಿ ಅಚ್ಚು ಹಾಕಿಸುವುದು, ಸಾಧ್ಯವಾದಲ್ಲಿ ಅವುಗಳನ್ನೇ ನಾಟಕ ರೂಪಕ್ಕೆ ತಿರುಗಿಸಿ ಜನರೆದುರು ಅಭಿನಯಿಸುವುದು, ಹಳೆಯ ಕಾವ್ಯಗಳನ್ನು ವಿಮರ್ಶಿಸಿ ಕವಿ ಪ್ರಶಸ್ತಿಗಳನ್ನು ಮುದ್ರಿಸುವುದು, ದೊಡ್ಡ ದೊಡ್ಡ ಗ್ರಂಥಗಳಿಂದ ಸ್ವಾರಸ್ಯವಾದ ಭಾಗಗಳನ್ನು ಆಯ್ದು ಸಂಗ್ರಹಮಾಡುವುದು, ಕವಿ ಕಾವ್ಯಗಳನ್ನು ಕುರಿತು ಜನರಿಗೆ ಉಪನ್ಯಾಸ ಮಾಡುವುದು, ಇವೇ ಮೊದಲಾದ ಅನೇಕ ಪ್ರಶಂಸನೀಯ ಕಾರ್ಯಗಳಿಂದ ಪ್ರಾಚೀನ ಸಾಹಿತ್ಯದೇವಿಯ ಪೂಜೆಯನ್ನು ಅನವರತವೂ ಮಾಡುತ್ತಲೇ ಇದ್ದಾರೆ. ಇದರಿಂದ ಆಧುನಿಕ ಸಾಹಿತಿಗಳು ಹಳೆಯ ಸಾಹಿತ್ಯವನ್ನು ಬಿಟ್ಟು ಸ್ವಚ್ಛಂದ ವೃತ್ತಿಯಿಂದ ಹೊರಟಿಲ್ಲ ಎಂದು ಎಲ್ಲರೂ ಮನಗಾಣಬಹುದು.

ನಮ್ಮ ಸಾಹಿತ್ಯವೇನೊ ಬೆಳೆಯುತ್ತಿದೆ. ಅದರ ಭವಿಷ್ಯತ್ತು ವೈಭವದಿಂದ ಕೂಡಿದೆ. ಹೀಗೆಂದು ನಾವು ಸುಮ್ಮನೆ ಕುಳಿತರಾಗುವುದಿಲ್ಲ, ಬೆಳೆದುದನ್ನು ದೇಶದ ಮೇಲೆಲ್ಲ ಹರಡಲು ಪ್ರಯತ್ನ ಮಾಡಬೇಕು. ಹಾಗೆ ಹರಡುವುದರಿಂದಲೇ ಮುಂದಿನ ಬೆಳೆಗೆ ಬೀಜ ಬಿತ್ತಿದಂತಾಗುವುದು. ಈಗ ಬೆಳೆಯುವವರಿಗೂ ಪ್ರೋತ್ಸಾಹಕೊಟ್ಟಂತಾಗುವುದು. ಜನರಲ್ಲಿ ಸಾಹಿತ್ಯಕಲಾಭಿರುಚಿಯನ್ನು ಶುದ್ಧಿಗೊಳಿಸ

ಬೇಕು; ಅಭಿವೃದ್ಧಿಗೊಳಿಸಬೇಕು. ಪೂರ್ವಕಾಲದಲ್ಲಿ ಸಾಹಿತ್ಯ ಶಿಲ್ಪ ಮೊದಲಾದ ಕಲೆಗಳು ರಾಜಾಶ್ರಯವನ್ನು ಹೊಂದಿ ಬೆಳೆದುವು. ಆ ಕಾಲವು ಎಂದೊ ಮಾಯವಾಯಿತು. ಈಗ ಪ್ರಭುತ್ವವು ಮೆಲ್ಲಮೆಲ್ಲಗೆ ಪ್ರಜಾಪ್ರಭುತ್ವವಾಗಿರುವುದು. ಪಂಡಿತವರ್ಗದಲ್ಲಿಯೂ, ರಾಜಾಶ್ರಯದಲ್ಲಿಯೂ ಮಾತ್ರವೇ ಸಲಿದಾಡುತ್ತಿದ್ದ ಕಲಾರಮಣಿಯು ಈಗ ತನ್ನ ಉತ್ತುಂಗ ಪೀಠದಿಂದ ಕೆಳಗಿಳಿದು ಜನಸಾಮಾನ್ಯರೊಡನೆ ಸಂಭಾಷಿಸುತ್ತಿದ್ದಾಳೆ. ಆದ್ದರಿಂದ ಲೇಖಕರು ತಮ್ಮ ಲೌಕಿಕ ಜೀವನಕ್ಕೆ ಬೇಕೇ ಬೇಕಾದ ಸಂಪತ್ತನ್ನು ರಾಜರಿಂದ ಪಡೆಯಲಾರರು. ಅವರ ಜೀವನಕ್ಕೆ ಅತ್ಯವಶ್ಯವಾದ ಮಿತಭೋಗವನ್ನು ಜನರೇ ಕಲ್ಪಿಸಿ ಕೊಡಬೇಕು. ಅವರ ಗ್ರಂಥಗಳು ಮಾರಾಟವಾಗಬೇಕು. ಅವರ ಮನಸ್ಸೆಲ್ಲ ಹೊಟ್ಟೆಯಲ್ಲೇ ಸುಳಿದಾಡದೆ ಉತ್ತಮ ಧ್ಯೇಯಗಳ ಗಗನ ಪ್ರಾಂತದಲ್ಲಿ ಹಾರಾಡುವಂತೆ ಮಾಡುವ ಕೆಲಸವು ಜನರ ಕೈಯಲ್ಲಿದೆ. ಪಾಶ್ಚಾತ್ಯ ದೇಶಗಳಲ್ಲಿ ಸಾಹಿತ್ಯಕಲೆಯೇ ಒಂದು ಜೀವನ ವೃತ್ತಿಯಾಗಿದೆ. ಅಲ್ಲಿಯ ಸಾಧಾರಣ ಲೇಖಕರೂ ಕೂಡ ಲಕ್ಷಾಧಿಕಾರಿಗಳಾಗಿದ್ದಾರೆ. ನಮ್ಮಲ್ಲಿ ಇನ್ನೂ ಆ ಕಾಲವು ಬಂದಿಲ್ಲ. ನಾವೀಗ ಪ್ರಯತ್ನ ಪಟ್ಟರೆ ಮುಂದೆ ಒಂದು ಶತಮಾನದ ಮೇಲಾದರೂ ಆ ಸ್ಥಿತಿಯು ಒದಗಬಹುದು. ಹಿಂದೆ ಪಾಶ್ಚಾತ್ಯ ದೇಶಗಳಲ್ಲಿಯೂ ಈಗ ನಮ್ಮಲ್ಲಿರುವ ಸ್ಥಿತಿಯೇ ಇತ್ತು. ಮಿಲ್ಟನ್ ಕವಿಯು ತನ್ನ 'ಪ್ಯಾರಡೈಸ್ ಲಾಸ್ಟ್' ಎಂಬ ಮಹಾಪುರಾಣ ಕಾವ್ಯವನ್ನು ಐದು ಪೌಂಡುಗಳಿಗೆ ಮಾರಿದನು. ಕಂತಿನ ಮೇಲೆ ಹಣವನ್ನು ತೆಗೆದುಕೊಂಡಿದ್ದರಿಂದ ಅವನ ಜೀವಮಾನದಲ್ಲಿಯೇ ಅವನಿಗೆ ಆ ಐದು ಪೌಂಡುಗಳು ದಕ್ಕಲಿಲ್ಲ. ಈಗ ಅದೇ 'ಪ್ಯಾರಡೈಸ್ ಲಾಸ್ಟ್' ಪುರಾಣಕಾವ್ಯವು ಅನೇಕ ಕಂಪನಿಗಳಿಗೆ ಲಕ್ಷಾಂತರ ಧನವನ್ನು ತಂದು ಕೊಡುತ್ತಿದೆ. ಆದ್ದರಿಂದ ನಮ್ಮ ಸ್ಥಿತಿಯು ನಮಗೆ ಮಾತ್ರವೇ ಸಂಭವಿಸಿಲ್ಲ. ಈಗ ನಾವು ವ್ಯವಸಾಯ ಮಾಡಿದರೆ ಮುಂದೆ ಬರುವ ನಮ್ಮ ಸಾಹಿತಿಗಳು ಪಯಿರು ಕೊಯ್ಯಬಹುದು.

ಸಾಹಿತ್ಯ ಪ್ರಚಾರವು ಗ್ರಂಥಕರ್ತರ ಕಲ್ಯಾಣದೃಷ್ಟಿಯೊಂದರಿಂದಲೇ ಆವಶ್ಯಕವಾದುದೆಂದು ಯಾರೂ ತಿಳಿಯಬಾರದು. ಜನರಿಗೆ ನೂತನ ಸಂಸ್ಕೃತಿಯ ಜ್ಞಾನ ಉಂಟಾಗಬೇಕಾದರೆ ಆ ಸಂಸ್ಕೃತಿಯನ್ನೊಳಗೊಂಡ ಸಾಹಿತ್ಯವು ಅವರಲ್ಲಿ ಹರಡಬೇಕು. ಅದರಿಂದಲೇ ದೇಶದ ಅಭ್ಯುದಯವು ಸಾಧ್ಯ. ರಷ್ಯಾ, ಚೀನಾ ದೇಶಗಳಲ್ಲಿಯೂ, ಜಪಾನ್, ತುರ್ಕಿಸ್ಥಾನಗಳಲ್ಲಿಯೂ ಆಗಿರುವ ಪರಿವರ್ತನೆಗೆ ಅಲ್ಲಿಯ ನೂತನ ಸಾಹಿತಿಗಳೇ ಮುಖ್ಯಕಾರಣ. ಯಾವಾಗ ನವದೃಷ್ಟಿಯ ಸಾಹಿತ್ಯವು ಜನ ಸಾಮಾನ್ಯದಲ್ಲಿ ಹೆಚ್ಚಾಗಿ ಪ್ರಚುರವಾಗುವುದೋ ಆಗಲೇ ದೇಶವು ಕಣ್ದೆರೆಯುವುದು. ಬರಿಯ ವಿಶ್ವವಿದ್ಯಾನಿಲಯಗಳಿಂದಲೂ, ನಗರದ ಉಪನ್ಯಾಸ ಮಂದಿರಗಳಿಂದಲೂ, ಅದು ಸುಲಭ ಸಾಧ್ಯವಲ್ಲ. ನಮ್ಮ ದೇಶದ ಈಗಿನ ಅವಸ್ಥೆಯಲ್ಲಂತೂ ಖುಚು ದೃಷ್ಟಿಯ ಸಾಹಿತ್ಯ ಪ್ರಚಾರವು ಅತ್ಯವಶ್ಯಕವಾದುದು. ದೇಶಾಭಿಮಾನಿಗಳೆಲ್ಲರೂ ಸಾಹಿತ್ಯಪ್ರಚಾರಕರಾಗಲೇಬೇಕು.

ಇನ್ನು ಸಾಹಿತ್ಯ ಪ್ರಚಾರ ಮಾರ್ಗಗಳಾವುವು ಎಂಬುದನ್ನು ಕುರಿತು ಸ್ವಲ್ಪ ವಿಚಾರಿಸೋಣ.

ಗಣಿಯನ್ನು ಅಗೆದು ಚಿನ್ನವನ್ನು ತೆಗೆಯಬೇಕಾದರೆ ಮೊದಲು ಗಣಿ ಇರುವ ವಿಷಯ ಗೊತ್ತಾಗಬೇಕು. ನಮ್ಮಲ್ಲಿ ಅನೇಕರಿಗೆ ಆ ವಿಷಯ ಗೊತ್ತೇ ಇಲ್ಲ. ನಾನು ಕೊಡಗಿಗೆ ಹೋಗಿ ಅಲ್ಲಿ ಕೆಲವು ಕಡೆ ಹೊಸ ಸಾಹಿತ್ಯವನ್ನು ಓದಿದಾಗ ಅಲ್ಲಿ ಸೇರಿದ ಜನರು ನನ್ನಲ್ಲಿಗೆ ಬಂದು ತಮಗೆ ಇಂತಹ ಸಾಹಿತ್ಯವಿರುವ ಸಂಗತಿಯೇ ತಿಳಿದಿಲ್ಲವೆಂದೂ ಅವುಗಳು ದೊರಕುವ ಸ್ಥಳಗಳನ್ನು ತಿಳಿಸಬೇಕೆಂದೂ ಕೇಳಿಕೊಂಡರು. ಜನರಿಗೆ ಸವಿಯುವ ಎದೆಯಿದೆ; ನೋಡುವ ಕಣ್ಣಿದೆ; ಕೆಲಸ ಮಾಡುವ ಶಕ್ತಿಯಿದೆ; ಮಾಡಲು ಉತ್ಸಾಹವಿದೆ. ಆದರೆ ಸಾಕಾದಷ್ಟು ತಿಳಿವಿಲ್ಲ. ಆ ತಿಳಿವನ್ನು ಪ್ರಚಾರಕರು ದಯಪಾಲಿಸಬೇಕು.

ಬರೆದುದನ್ನು ರಸವತ್ತಾಗಿ ಓದಲು ಕಲಿಯಬೇಕು. ಏಕೆಂದರೆ ಸರಿಯಾಗಿ ಓದಲು ಬಾರದಿದ್ದರೆ ಕಾವ್ಯದ ಅರ್ಥ ಸ್ವಾರಸ್ಯವು ಓದುಗರಿಗೆ ದೊರಕುವುದೇ ಇಲ್ಲ. ಕವನಗಳಾಗಲಿ, ನಾಟಕಗಳಾಗಲಿ,

ಬರಿಯ ಛಂದಗಳು ಮಾತ್ರವೇ ಅಲ್ಲ; ಭಾವವು ಲಯ ಬದ್ಧವಾದ ಭಾಷೆಯಲ್ಲಿ ಮೈವೆತ್ತ ರಸಕಾರ್ಯಗಳು. ಹೇಳುವ ವಿಷಯ ಮಾತ್ರವಲ್ಲದೆ, ಹೇಳುವ ರೀತಿಯೂ ನಮ್ಮನ್ನು ಮೋಹಿಸುವುದು. ಕೆಲವು ಸಾರಿ ವಿಷಯವು ಹೇಳುವ ರೀತಿಯಿಂದಲೇ ಮಹತ್ತಾಗಬಹುದು. ಆದ್ದರಿಂದ ಸಾಹಿತ್ಯ ಪ್ರೇಮಿಗಳು ಕಾವ್ಯವಾಚನ ಕಲೆಯನ್ನು ಅಭ್ಯಾಸ ಮಾಡಬೇಕು. ಉತ್ತಮ ಗಮಕಿಗಳು ಕನ್ನಡ ಮಹಾಭಾರತವನ್ನು ಓದಿದರೆ ಪಂಡಿತ ಪಾಮರರೆಲ್ಲರೂ ಮುಗ್ಧರಾಗಿ ಕೇಳುವರು. ವಾಣಿಯ ವೈಖರಿಯೇ ಭಾವದ ಮಹಿಮೆಯನ್ನೂ ಪದಗಳ ಅರ್ಥವನ್ನೂ ಎಲ್ಲರಿಗೂ ತಿಳಿಸಿ ಬಿಡುವುದು. ಸಾಹಿತ್ಯ ಪ್ರಚಾರಕರು ಅದಷ್ಟು ಮಟ್ಟಿಗೆ ಕಾವ್ಯವಾಚನ ಶಕ್ತಿಯನ್ನು ಸಂಪಾದಿಸಬೇಕು. ಇದು ಮೊದಲನೆಯ ಮೆಟ್ಟಲು.

ಅಲ್ಲಲ್ಲಿ ಕರ್ಣಾಟಕ ಸಂಘಗಳನ್ನು ಸ್ಥಾಪಿಸಿ ಜನರಿಗೆ ಸಾಹಿತ್ಯ ಪ್ರಪಂಚದಲ್ಲಿ ಈಗ ನಡೆಯುತ್ತಿರುವ ಕಾರ್ಯವನ್ನು ತಿಳಿಸಬೇಕು. ಹಳೆಯ ಸಾಹಿತ್ಯದಲ್ಲಿಯಾಗಲಿ, ಹೊಸ ಸಾಹಿತ್ಯದಲ್ಲಿಯಾಗಲಿ ದೊರಕುವ ಉತ್ತಮ ಕಾವ್ಯಭಾಗಗಳನ್ನು ಓದಿ ಚರ್ಚೆಮಾಡಿ ಟೊಳ್ಳುಗಟ್ಟಿಗಳನ್ನು ಬೇರೆ ಬೇರೆ ಮಾಡಿ ತೋರಿಸಿ ಸದಸ್ಯರಲ್ಲಿ ವಿಮರ್ಶ ಬುದ್ಧಿಯೂ, ರುಚಿಶುದ್ಧಿಯೂ, ಉಂಟಾಗುವಂತೆ ಮಾಡಬೇಕು. ವಿಮರ್ಶಾತ್ಮಕವಾದ ಉಪನ್ಯಾಸಗಳನ್ನು ಕೊಡಬೇಕು. ಆತ್ಮ ಸಂಸ್ಕಾರಕ್ಕೆ ಸಾಹಿತ್ಯದಿಂದ ಆಗುವಷ್ಟು ಸಹಾಯವು ಕೆಲವು ಸಾರಿ ಮತಾಚಾರದಿಂದಲೂ ಆಗುವುದಿಲ್ಲ. ಸೂರ್ಯೋದಯ ಚಂದ್ರೋದಯಗಳನ್ನೂ ಹಸುರಿನ ಮೇಲೆ ನಲಿಯುವ ಎಳೆ ಬಿಸಿಲನ್ನೂ, ನೀಲಾಕಾಶವನ್ನೂ, ಶ್ವೇತಶರನ್ಮೇಘಮಾಲೆಯನ್ನೂ, ಕೋಗಿಲೆ ಕಾಜಾಣಗಳ ಇಂಚರವನ್ನೂ, ನಿಬಿಡಾರಣ್ಯಗಳ ರುದ್ರರಮಣೀಯತೆಯನ್ನೂ, ಗಗನಚುಂಬಿತ ಪರ್ವತಗಳ ಧೀರಗಾಂಭೀರ್ಯವನ್ನೂ ನೋಡಿ, ಅನುಭವಿಸಿ ಸೌಂದರ್ಯದಲ್ಲಿ ತಲ್ಲೀನನಾಗುವ ರಸಜೀವಿಯು ಮೂಲೆಯಲ್ಲಿ ಕುಳಿತು ಮೂಗು ಹಿಡಿದುಕೊಂಡು ಹತ್ತು ಮಂತ್ರಗಳನ್ನು ಶಾಸ್ತ್ರ

ಕ್ಕಾಗಿ ಗೋಣಗುವಧರ್ಮನಟನಿಗಿಂತಲೂ ಸಾವಿರಪಾಲು ಉತ್ತಮನು. ಅವನು ಪರಮಾತ್ಮನ ಒಂದಂಶವಾದ ಸೌಂದರ್ಯವನ್ನು ಆರಾಧಿಸುವುದರಿಂದ ದೇವರಿಗೆ ಸಮೀಪದಲ್ಲಿರುತ್ತಾನೆ; ಅರ್ಚಕನಿಗಿಂತಲೂ ಎಷ್ಟೋ ಸಮೀಪದಲ್ಲಿರುತ್ತಾನೆ. ಜಗತ್ತಿಗಿಂತಲೂ ಮಹಿಮಾಮಯವಾದ ದೇವಸ್ಥಾನವು ಮತ್ತೊಂದುಂಟೆ? ಶುದ್ಧವಾದ ಸೌಂದರ್ಯಾನುಭವಕ್ಕಿಂತಲೂ ಬೇರೊಂದು ಪೂಜೆಯುಂಟೆ? ಕೋಟ್ಯನುಕೋಟಿ ನಕ್ಷತ್ರಗಳಿಂದ ಖಚಿತವಾದ ಅನಂತವಾದ ಅಪಾರವಾದ ರಾತ್ರಿಯ ಅಂತರಿಕ್ಷವನ್ನು ಈಕ್ಷಿಸಿದಾಗ ಹೃದಯಮಂದಿರದಲ್ಲಿ ಆವಿರ್ಭವಿಸಿದ ಪರಮಾತ್ಮನು ಅನಿಲಸಂಚಾರವಿಲ್ಲದ ಕತ್ತಲು ಕವಿದ ಗರ್ಭಗುಡಿಯಲ್ಲಿ ನಮಗೆ ಮೈದೋರುವನೆ? ಅದನ್ನರಿತೇ ಆಂಗ್ಲೇಯ ಮಹಾ ಕವಿಯೊಬ್ಬನು "ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ" ಎಂಬ ಮಹಾ ವಾಕ್ಯವನ್ನು ಹಾಡಿರುವನು. ಆದ್ದರಿಂದ ಉತ್ತಮ ಕಾವ್ಯ ಪರಿಚಯವನ್ನು ಮಾಡಿಕೊಟ್ಟು, ಜನರಿಗೆ ರಸದೃಷ್ಟಿಯನ್ನು ದಾನಮಾಡಬೇಕು. ಇದು ಎರಡನೆಯ ಮೆಟ್ಟಲು.

ಸಂಘಗಳ ಸ್ಥಾಪನೆಯಾಗಲು ಅನುಕೂಲವಿಲ್ಲದ ಗ್ರಾಮಾಂತರಗಳಲ್ಲಿರುವ ನಮ್ಮ ಜನರಿಗೆ ಸಾಹಿತ್ಯಾಭಿರುಚಿಯುಂಟಾಗಬೇಕಾದರೆ ಸಾಹಿತ್ಯಪ್ರೇಮಿಗಳು ಹಳ್ಳಿಗಳಲ್ಲಿ ಆಗಾಗ್ಯೆ ಸಮಯದೊರೆತಾಗ ಸಂಚರಿಸಿ ಹಳ್ಳಿಗರು ಒಂದೆಡೆ ನೆರೆಯುವಂತೆ ಮಾಡಿ ಅವರಿಗೆ ಕಾವ್ಯಗಳನ್ನು ಓದಿ ಹೇಳಬೇಕು. ಶ್ರೀಮಾನ್ ಪಂಜೆ ಮಂಗೇಶರಾಯರು ಇದನ್ನು ಮಂಗಳೂರು ಪ್ರಾಂತ್ಯದಲ್ಲಿ ಬಹುಕಾಲದಿಂದ ಮಾಡುತ್ತಲಿರುವರು. ಸ್ವಲ್ಪ ಕಾಲ ಹಾಗೆ ಮಾಡಿದರೆ, ತರುವಾಯ ಹಳ್ಳಿಗರೇ ಸಾಹಿತ್ಯವನ್ನು ಹುಡುಕಿಕೊಂಡು ಹೋಗಿ ಓದುವರು; ಅಥವಾ ಕೇಳುವರು. ಇದು ಮೂರನೆಯ ಮೆಟ್ಟಲು.

ಇದೇ ಸಮಯದಲ್ಲಿ ತಮಗೆ ಇನ್ನೊಂದು ವಿಷಯವನ್ನು ಸೂಚಿಸಿ ಬಿಡುತ್ತೇನೆ. ಅದೇನೆಂದರೆ, ಜನಪದ ಸಾಹಿತ್ಯಸಂಗ್ರಹ. ಜನಪದ ಸಾಹಿತ್ಯವನ್ನು ಒಟ್ಟು ಗೂಡಿಸುವುದು ನಮ್ಮೆಲ್ಲರ ಕರ್ತವ್ಯ.

ಹಳ್ಳಿಯ ಹಾಡುಗಳು, ಕೋಲಾಟದ ಪದಗಳು, ಲಾವಣಿಗಳು ಮೊದಲಾದುವುಗಳಲ್ಲಿ ಸಾಮಾನ್ಯ ಜನರ ಮನೋಭಾವಗಳು ಬಿಚ್ಚಿ ತೋರುವುವು. ಕೆಲವು ಸಾರಿ ಅವುಗಳಲ್ಲಿ ಉತ್ತಮ ಸಾಹಿತ್ಯವೂ ದೊರಕುವುದು. ಈ ಭಾಗದ ಕೆಲಸಕ್ಕೆ ನಾವಿನ್ನೂ ಕೈ ಹಾಕಿಲ್ಲವೆಂದೇ ಹೇಳಬಹುದು. ಈಗೀಗ ಜಯ ಕರ್ನಾಟಕ, ಪ್ರಬುದ್ಧ ಕರ್ಣಾಟಕ ಮೊದಲಾದ ಪತ್ರಿಕೆಗಳಲ್ಲಿ ಅಲ್ಪ ಸ್ವಲ್ಪ ಜನಪದ ಸಾಹಿತ್ಯವು ಪ್ರಕಟವಾಗುತ್ತಿದೆ. ಆದರೆ ಅದು ಸಾಲದು. ಈ ಕೆಲಸವು ಒಬ್ಬಿಬ್ಬರಿಂದ ಸಾಧ್ಯವಲ್ಲ. ಆಡಿಕೆಯ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ಊರುಗಳಿಗೆ ಹೋದಾಗ ಈ ಸಂಗ್ರಹ ಕಾರ್ಯವನ್ನು ಮಾಡಬಹುದು. ಅದರಿಂದ ನಮ್ಮ ಸಾಹಿತ್ಯಕ್ಕೊಂದು ಹೊಸ ಕೋಡು ಬಂದಂತಾಗುವುದು.

ನಾಲ್ಕನೆಯ ಮೆಟ್ಟಲೆಂದರೆ, ದೃಶ್ಯಕಾವ್ಯಗಳ ಅಭಿನಯ. ಹೊಸ ರೀತಿಯಿಂದ ಬರೆದ ನಾಟಕಗಳನ್ನು ಆಡಿತೋರಿಸುವುದರಿಂದ ಜನರಲ್ಲಿ ಸಾಹಿತ್ಯಾಭಿಮಾನವು ಹೆಚ್ಚುವುದು. ಅಲ್ಲದೆ ನಾಟಕ ರಂಗವು ಓದು ಕಲಿತವರಿಗೂ, ಓದುಕಲಿಯದವರಿಗೂ ಎಲ್ಲರಿಗೂ ಆದರಣೀಯವಾಗಿರುವುದು. ರಂಗದ ಸಹಾಯದಿಂದ ಯಾವ ತತ್ತ್ವಗಳನ್ನು ಬೇಕಾದರೂ ಜನರಲ್ಲಿ ಹರಡಬಹುದು. ಉದಾಹರಣೆಗಾಗಿ ಭಾಗವತರಾಟಗಳನ್ನು ತೆಗೆದುಕೊಳ್ಳೋಣ. ದಕ್ಷಿಣಕನ್ನಡ ಜಿಲ್ಲೆಯ ಸಾಮ್ರಾಜ್ಯದಿಂದ ಮಲೆನಾಡಿಗರಿಗೆ ಒಂದು ಮಹದುಪಕಾರವಾಗಿದೆ. ಹಳ್ಳಿಗಳಲ್ಲಿ ಭಾಗವತರಾಟವೆಂದರೆ ಜನರು ಹದಿನೈದು ಇಪ್ಪತ್ತು ಮೈಲುಗಳಿಂದಲೂ ಕೂಡ ಬರಲು ಹಿಂಜರಿಯುವುದಿಲ್ಲ. ಈ ಬಯಲಾಟಗಳನ್ನು ನೋಡಿ ನೋಡಿ ನಿರಕ್ಷರಕುಕ್ಷಿಗಳಾದ ಜನರೂ ಕೂಡ ಎಷ್ಟೋ ಜ್ಞಾನ ಸಂಪಾದನೆ ಮಾಡಿದ್ದಾರೆ. 'ಭೀಮವಿಜಯ'ವಾದರೆ ಭೀಷ್ಮಾಚಾರ್ಯನ ತತ್ತ್ವೋಪದೇಶವಿದ್ದೇ ಇರುತ್ತದೆ. ಬರಿಯ ತತ್ತ್ವೋಪದೇಶವನ್ನು ಕೇಳಲಾರದ ಜನರು ಭಾಗವತರಾಟದಲ್ಲಿ ಒಂದು ಘಂಟೆಯ ಮೇಲಾದರೂ ಸುಮ್ಮನೆ ಕುಳಿತು ಅದನ್ನು ಸಂತೋ

ಷದಿಂದ ಕೇಳುವರು. ಇದೀಗ ದೃಶ್ಯಕಾವ್ಯಗಳ ಮಹಿಮೆ. ಸಾಹಿತ್ಯ ಪ್ರಚಾರಕಾರ್ಯದಲ್ಲಿ ದೃಶ್ಯಕಾವ್ಯ ಪ್ರದರ್ಶನವು ಒಂದು ಬಹು ಮುಖ್ಯವಾದ ಮಾರ್ಗ. 'ಗದಾಯುದ್ಧ'ವನ್ನು ನನ್ನ ಪೂಜ್ಯ ಗುರುಗಳಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಅಸದೃಶ ಪ್ರತಿಭೆಯಿಂದಲೂ ಕುಶಾಗ್ರಬುದ್ಧಿಯಿಂದಲೂ ನಾಟಕ ರೂಪಕ್ಕೆ ತಿರುಗಿಸಿ, ರನ್ನನ ರತ್ನವನ್ನು ಕಡೆದು ಮೆರುಗು ಕೊಟ್ಟು ರನ್ನನ ಕೀರ್ತಿಯು ಕನ್ನಡ ನಾಡಿನಲ್ಲಿ ಮೊದಲಿಗಿಂತಲೂ ಇಮ್ಮಡಿಯಾಗಿ ಬೆಳಗುವಂತೆ ಮಾಡಿರುವ ವಿಷಯವು ತಮ್ಮಗಳಿಗೆ ತಿಳಿದಿರಬೇಕು. ಗದಾಯುದ್ಧ ಹಳಗನ್ನಡದ ಕಾವ್ಯ. ಭಾಷೆಯು ಪಂಡಿತರಲ್ಲದವರಿಗೆ ಸ್ವಲ್ಪ ಕ್ಲಿಷ್ಟವಾದುದು. ಆದರೂ ಅದು ದೃಶ್ಯರೂಪಕ್ಕೆ ತಿರುಗಿದ ಮೇಲೆ, ಅದನ್ನು ಅನೇಕಾವರ್ತಿ ಅಭಿನಯಿಸಿದ್ದಾರೆ. ಹಳಗನ್ನಡವನ್ನು ಅರಿಯದವರು, ರನ್ನನನ್ನು ಎಂದೂ ಓದದವರೂ ಕೂಡ, ಅದನ್ನು ನೋಡಿ ಹಿಗ್ಗಿ ಮೈಮರೆತಿದ್ದಾರೆ. ಅಷ್ಟೇ ಅಲ್ಲ. 'ಗದಾಯುದ್ಧ ನಾಟಕ'ವನ್ನು ಓದು ಬರುವ ಕನ್ನಡಿಗರು ಪಡೆಯದಿದ್ದರೆ ಅವರು ಸುಸಂಸ್ಕೃತರ ವರ್ಗಕ್ಕೆ ಸೇರಿದವರಲ್ಲ ಎಂಬ ಭಾವನೆಯೂ ಜನಿಸುತ್ತಿದೆ. 'ಗದಾಯುದ್ಧ'ವು ನಾಟಕರೂಪಕ್ಕೆ ತಿರುಗಿದ ಮೇಲೆ ರನ್ನನು, ಎಲ್ಲಿಯೋ ಅಲ್ಪಸಂಖ್ಯೆಯ ನರೆತ ಪಂಡಿತವರ್ಗದವರ ಪುಸ್ತಕ ಭಂಡಾರದಲ್ಲಿ ಮೂಲೆ ಸೇರಿ ಗೋಳಿಡುತ್ತಿದ್ದ ಆರ್ಯ ರನ್ನನು, ಎಲ್ಲರ ಜಿಹ್ವಾಗ್ರದಲ್ಲಿಯೂ ಕುಣಿದು ನಲಿಯತೊಡಗಿರುವನು. ಅಷ್ಟೇ ಅಲ್ಲ, ರನ್ನಕವಿ ಸ್ಮಾರಕೋತ್ಸವವೂ, ರನ್ನಕವಿಪ್ರಶಸ್ತಿಯೂ ನಾಟಕವನ್ನೇ ಹಿಂಬಾಲಿಸಿ ಹೆಸರುಗೊಂಡವು. ಈ ನಿದರ್ಶನದಿಂದ ದೃಶ್ಯಕಾವ್ಯಗಳ ಮಹಿಮೆಯು ನಿಮಗಿನಿತಾದರೂ ಗೊತ್ತಾಗಿರಬಹುದು.

ನಮ್ಮ ಕಾರ್ಯವು ಅಪಾರವಾಗಿದೆ. ಸಾಹಿತ್ಯದೇವಿಗೆ ಎಷ್ಟು ಜನ ದಾಸರಿದ್ದರೂ ಸಾಲದಾಗಿದೆ. ಆದರೆ ನಮ್ಮಲ್ಲಿ ಭಾಷಾಪ್ರೇಮಿಗಳು ಕಡಮೆಯಾಗಿಲ್ಲ. ಈಗಾಗಲೇ ಎಷ್ಟೋ ಜನರು ದೀಕ್ಷಿತರಾಗಿದ್ದಾರೆ. ಇನ್ನೂ ಅನೇಕ ತರುಣರು ಮುಂದೆ ಬರುತ್ತಿದ್ದಾರೆ. ಮುಂದೆ

ಬರುವವರೂ ಬಹಳ ಮಂದಿ ಇದ್ದಾರೆ ಎಂಬ ನೆಚ್ಚಿದೆ. ಆದ್ದರಿಂದ ನಾವು ನಿರುತ್ಸಾಹಿಗಳಾಗಬೇಕಿಲ್ಲ. ಆದಕ್ಕೆ ನೀವಿಂದು ಕೈಕೊಂಡಿರುವ ರಸೋತ್ಸವವೇ ಒಂದು ದೊಡ್ಡ ಸಾಕ್ಷಿ. ಸಿರಿಗನ್ನಡಂ ಗೆಲ್ಗೆ!